
ಮೊನಾಸ್ಟರಿ ಆವರಣದಲ್ಲಿನ ಮಳಿಗೆಗಳು


ವರ್ಣರಂಜಿತ ಗೋಡೆಗಳು

ಶುರುಮಾಡಿದರಂತೆ. ಅಲ್ಲಿಯೇ ದೊರೆಯುವ ಕಲ್ಲು ಮತ್ತು ಮರಮುಟ್ಟುಗಳನ್ನು ಬಳಸಿ ಈ ಮಠವನ್ನು ಕಟ್ಟಲಾಗಿದೆ. ಆನಂತರ ರಷಿಯನ್ನರ ಚಕ್ರವರ್ತಿ (ಝಾರ್) ಪೀಟರ್ ತನ್ನ ಕಾಲದಲ್ಲಿ (927–968) ಈ ಮಠವನ್ನು ವಿಸ್ತರಿಸಿ ಕಟ್ಟಲು ಉದಾರವಾಗಿ ಹಣ ಸಹಾಯ ಮಾಡಿದನಂತೆ.

ಅವನ ನಂತರ ಬಲ್ಗೇರಿಯಾವನ್ನು ಆಳಿದ ಪ್ರತಿ ರಾಜನೂ ಈ ಮಠಕ್ಕೆ ದೊಡ್ಡ ದೊಡ್ಡ ಮೊತ್ತದ ದೇಣಿಗೆಗಳನ್ನು ನೀಡಿ ಅದನ್ನು ಅತ್ಯಂತ ಬಲಿಷ್ಠವಾದ ಮಠವನ್ನಾಗಿ ಬೆಳೆಸಿದರಂತೆ. 12ರಿಂದ 14ನೇ ಶತಮಾನದ ವೇಳೆಗೆ ಬಲ್ಗೇರಿಯಾ ದೇಶದ ಆತ್ಮದಂತೆ ಕೆಲಸ ಮಾಡಲಾರಂಭಿಸಿದ ಈ ಮಠ ಆಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅತ್ಯುನ್ನತ ಸ್ಥಾನ ಪಡೆದು ರಾಜಕೀಯವಾಗಿ ಕೂಡ ತನ್ನ ವರ್ಚಸ್ಸನ್ನು ಗಳಿಸಿಕೊಂಡು ಜನಪ್ರಿಯವಾಯಿತು.

ಆ ಕಾಲದಲ್ಲಿ (1334–1335) ಕಟ್ಟಿದ ಒಂದು ಬುರುಜು ಇಂದಿಗೂ ಇದೆ. ಮರದ ಮೆಟ್ಟಿಲುಗಳು, ಕಲ್ಲಿನ ಸಣ್ಣ ಓಣಿಯನ್ನು ಹೊಂದಿರುವ ಇಲ್ಲಿಗೆ ಪ್ರವಾಸಿಗರು ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆ. ಆದರೆ, ಇದನ್ನು ಬಳಸಬಹುದಾದ ಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗಿದೆ. ಇದು ಈ ಮಠದ ಪ್ರಾಂಗಣದಲ್ಲಿರುವ ಎಲ್ಲ ಕಟ್ಟಡಗಳಲ್ಲಿ ಅತ್ಯಂತ ಪುರಾತನವಾದದ್ದು.

ಮಠದ ಪ್ರವೇಶದಲ್ಲಿ ಅತ್ಯಂತ ಎತ್ತರವಾದ, ವಿಶಾಲ ಮತ್ತು ವೈಭವೋಪೇತವಾಗಿ ನಿರ್ಮಿಸಿದ ದ್ವಾರಗಳಿವೆ. ಇವು ಕೂಡ 13–14ನೇ ಶತಮಾನಕ್ಕೆ ಸೇರಿದ ನಿರ್ಮಾಣ. ಇಂತಹ ಪ್ರವೇಶ ದ್ವಾರದಲ್ಲಿ ನಿಂತ ನಮಗೆ, ಒಂದು ಕೋಟೆಯ ದ್ವಾರದಲ್ಲಿ ನಿಂತ ಅನುಭವವಾಯಿತು. ಸಾಮಾನ್ಯವಾಗಿ ಮಠ, ಆಶ್ರಮಗಳಲ್ಲಿ ತೆರೆದ ಬಾಗಿಲು ಇರುತ್ತದೆ. ಈ ಮಠದ ಕಟ್ಟಡ ಸಮುಚ್ಚಯವನ್ನು ಇಂತಹ ದೊಡ್ಡ ಬಾಗಿಲುಗಳಿಂದ ಮುಚ್ಚುವ ಅಗತ್ಯವೇನಿತ್ತು ಎಂಬ ಪ್ರಶ್ನೆ ಮೂಡುತ್ತದೆ.

## ಸತತ ದಾಳಿಗೆ ನಲುಗಿದ ಕಥೆ

15ನೇ ಶತಮಾನದ ವೇಳೆಗೆ ಒಟ್ಟೊಮಾನ್ ಅಧಿಪತ್ಯದ ದಂಡುಕೋರರು ಸತತವಾಗಿ ಈ ಮಠದ ಮೇಲೆ ಹಲವು ಬಾರಿ ಆಕ್ರಮಣ ಮಾಡಿ ಅಲ್ಲಿದ್ದ ಕಟ್ಟಡಗಳನ್ನು ಧ್ವಂಸ ಮಾಡಿದರೆನ್ನಲಾಗಿದೆ. ಇದರಿಂದ ನೊಂದ ರಷ್ಯಾದ ಸಾಂಪ್ರದಾಯಿಕ ಚರ್ಚ್ ಮತ್ತು ಅಲ್ಲಿನ ಇತರೆ ಮಠಗಳು ಧಾರಾಳವಾಗಿ ಹಣ ಕಳಿಸಿ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿದ ಕಾರಣ ಮಠ ಮುಂದುವರೆಯಿತು ಎಂಬ ಚರಿತ್ರೆಯಿದೆ. ಇಂತಹ ಸಂದರ್ಭಗಳಲ್ಲಿ, ಬಹುತೇಕ ನಾಶವಾದ ಸ್ಥಿತಿಗೆ ತಲುಪಿದ್ದ ಸಂತ ಇವಾನನ ಅಸ್ಥಿ ಮತ್ತಿತರ ಅತಿ ಮುಖ್ಯ ನಿಧಿಗಳನ್ನು ಹೊಸ ಕಟ್ಟಡಕ್ಕೆ ಸಾಗಿಸಿ ಸಂರಕ್ಷಣೆ ಮಾಡಿದರಂತೆ.

ಈ ಕಟ್ಟಡ ಸಮುಚ್ಚಯದ ನಡುವೆ ಒಂದು ಚರ್ಚನ್ನೂ ಕಟ್ಟಲಾಗಿದೆ. ಇದು ನಾವು ಭಾರತದಲ್ಲಿ ಕಾಣುವ ಚರ್ಚಿನ ರೀತಿಯ ಕಟ್ಟಡವಲ್ಲ. ಪಾಶ್ಚಾತ್ಯ ದೇಶಗಳ ಪುರಾತನ ಅಥವಾ ಆಧುನಿಕ ಚರ್ಚುಗಳ ರೂಪದಲ್ಲಿಯೂ ಇಲ್ಲ. ನೆಲದ ಮೇಲೆ ಒಂದೇ ಅಂತಸ್ತಿನ, ಅತಿ ಎತ್ತರದ ಮಾಡಿನ, ಗುಡಿಯೆನ್ನುವ ಶೈಲಿಯ ಕಟ್ಟಡ. ಪೂರ್ವ ಯೂರೋಪಿನ ಮೇಲೆ ಯೂರೋಪು ಮತ್ತು ಏಷಿಯಾ ಖಂಡಗಳೆರಡರ ಪ್ರಭಾವ ನೂರಾರು ವರ್ಷಗಳ ಕಾಲದಿಂದ ಇದ್ದಿತು ಎನ್ನುವುದನ್ನು ನಾವಿಲ್ಲಿ ನೋಡಬಹುದು.

ರಿಲಾ ಮೊನಾಸ್ಟರಿಯ ಹೃದಯ ಭಾಗವಾದ ಈ ಚರ್ಚನ್ನು ಹದಿನೆಂಟನೇ ಶತಮಾನದಲ್ಲಿ (1834–1837ರಲ್ಲಿ) ನಿರ್ಮಿಸಲಾಗಿದೆ. ಐದು ಬುರುಜುಗಳನ್ನು ಹೊಂದಿದೆ. ಚರ್ಚಿನ ಹೊರಗಿನ ಮತ್ತು ಒಳಗಿನ ಗೋಡೆಗಳು ವರ್ಣರಂಜಿತ ಪೇಂಟಿಂಗ್‌ಗಳಿಂದ ತುಂಬಿದೆ. ಇವು ಕ್ರಿಸ್ತನ ಮತ್ತು ಆತನ ಸುತ್ತಲ ಸಮಾಜದ, ದೇವಾನುದೇವತೆಗಳ ಕಥೆಗಳನ್ನು ಹೇಳುತ್ತವೆ.

ದೇವರ ಗರ್ಭಗುಡಿ ಮತ್ತು ಹೊರಗಿನ ಕೋಣೆಗಳನ್ನು ಬೇರ್ಪಡಿಸುವ ಕೆತ್ತನೆ ಮತ್ತು ದೈವೀ ಚಿಹ್ನೆಗಳಿರುವ ಸ್ಥಳಾಂತರಗೊಳಿಸಬಲ್ಲ ಮರದ ಗೋಡೆ (ಐಕಾನೋಸ್ಟೇಸಿಸ್) ಇಲ್ಲಿ ಬಹಳ ಪ್ರಸಿದ್ಧ. ಮಾಡಿನ ಸೂರಿನಿಂದ ಇಳಿಬಿದ್ದ ಅಗಲ ದೀಪಾಲಂಕಾರ ಮತ್ತು ಅಕ್ಕಪಕ್ಕದ ಚಾಪೆಲ್‌ಗಳ ಅಲಂಕಾರ ಕೂಡ ಅತಿ ಸುಂದರವಾಗಿದೆ. 14ನೇ ಶತಮಾನದಿಂದ ಹಿಡಿದು 19ನೇ ಶತಮಾನದವರೆಗಿನ ಹಲವು ವಿಚಾರಗಳನ್ನು ಈ ಚರ್ಚು ಪ್ರತಿನಿಧಿಸುತ್ತದೆ. ಸಂಪ್ರದಾಯಸ್ಥರ ಮಠವಾದರೂ, ನಾವು ಹೋದಾಗ ಎಲ್ಲ ಧರ್ಮದ ಜನರಿಂದ ಈ ಚರ್ಚು ತುಂಬಿ ಹೋಗಿತ್ತು. ಯಾರು ಬೇಕಾದರೂ ಇಲ್ಲಿ ಪ್ರಾರ್ಥನೆ ಸಲ್ಲಿಸಬಹುದು. ಗಾಢ ಚಿನ್ನದ ಬಣ್ಣದ ಲೇಪನವಿರುವ ಮಧ್ಯ ಭಾಗದ ಚರ್ಚು ಕಣ್ಣುಗಳನ್ನು ಕೋರೈಸುತ್ತದೆ. ಆದರೆ, ಅದು ಚಿನ್ನವಲ್ಲ ಎಂದು ಗೈಡ್ ನಮಗೆ ವಿವರಿಸಿದ.

ಚರ್ಚಿನ ಸುತ್ತಲೂ ದೊಡ್ಡ ಪ್ರಾಂಗಣವಿದೆ. ಈ ಅಂಗಳದ ನೆಲಕ್ಕೆ ಕಲ್ಲಿನ ಹಾಸಿದೆ. ನಡುನಡುವೆ ಗಿಡಗಳು, ಕಾರಂಜಿಗಳು ಇವೆ. ಈ ಕಾರಂಜಿಗಳಲ್ಲಿ ಕಣಿವೆಯಲ್ಲಿ ಹರಿವ ತೊರೆಗಳಿಂದ ದಿನದ ಇಪ್ಪತ್ತನಾಲ್ಕು ಗಂಟೆಯೂ ಎಡೆಬಿಡದೆ ನೀರು ಹರಿಯುತ್ತಿರುತ್ತದೆ.